ಮಧುರವಾದ ಮಾತಲ್ಲವೇ ಬೇಕಾಗಿರುವುದು. ಈ ರೊಬೊ ಡಿಸೈನರ್ ನಿಜಕ್ಕೂ ಅಸಾಮಾನ್ಯ! ಹ್ಯಾಟ್ಸ್ ಆಫ್ ಟು ಹಿಮ್. ಇದು ರೊಬೊ ಆಗದೆ ನಿಜವಾದ ಯುವತಿಯೇ ಆಗಿಬಿಟ್ಟರೆ ತನ್ನ ಜನ್ಮ ಸಾರ್ಥಕ!

'ಇದೋ ಈಗಲೇ ಬಿಟ್ಟೆ' ಸೇದುತ್ತಿದ್ದ ಸಿಗರೇಟನ್ನು ಆಷ್ಟ್ರೇ ಸೇರಿಸಿದ ಮನು.

'ದಟ್ ಇಸ್ ಲೈಕ್ ಅ ಗುಡ್ ಬಾಯ್... ಥ್ಯಾಂಕ್ಸ್... ಈಗ ಮಲಗು ಬೆಳಿಗ್ಗೆ ನೀನು ಎಂಟರ ಟ್ರೈನ್ ಹಿಡಿದು ನ್ಯೂಯಾರ್ಕಿಗೆ ಹೋಗಬೇಕಲ್ಲವೆ?'

ಅಡಿಗಡಿಗೂ ಮನುಗೆ ಅಚ್ಚರಿ! ಆ ರೊಬೊನ ಒಂದೊಂದು ಮಾತಿನಲ್ಲಿ ಒಂದೊಂದು ವ್ಯಕ್ತಿತ್ವ ಕಾಣಿಸುತ್ತಿತ್ತು. ಒಮ್ಮೆ ಹಿತವಚನ ಹೇಳುವ ತಂದೆಯಂತೆ, ಮಿತ್ರನಂತೆ, ಮಮತೆಯ ತಾಯಿಯಂತೆ... ಹೂಂ... ಪ್ರೇಮ ಯಾಚಿಸುವ ತರುಣಿಯಂತೆ! ಕಾಮನೆಗಳನ್ನು, ಬಯಕೆಗಳನ್ನು ಬಡಿದೆಬ್ಬಿಸುವ ಪ್ರೇಯಸಿಯಂತೆ!!...

'ಓ... ಹೌದು ನಾಳೆ ನ್ಯೂಯಾರ್ಕಿಗೆ ಹೋಗಬೇಕು. ಓ.ಕೆ ನಾನೀಗ ಮಲಗುತ್ತೇನೆ... ನೀನು?...'

'ನಾನೂ ಮಲಗುತ್ತೇನೆ...'

'ಎಲ್ಲಿ?...'

'ತುಂಟಾ... ಅದನ್ನೂ ಹೇಳಬೇಕೆ?...'

ಮನುಗೆ ಜ್ವರ ಬಂದಂತಾಯಿತು! ಅವನಿನ್ನೂ ಕುಮಾರ! ಇಂತಾ ಸುಂದರಿ, ಪಕ್ಕದಲ್ಲಿ ಮಲಗುತ್ತೇನೆಂದರೆ ಹೇಗಾಗಬಹುದೋ ಹಾಗೆಯೇ ಆಯಿತು.

'ತುಂಬಾ ಹೆದರಿದ್ದೀಯಾ? ಏನೂ ಆಗುವುದಿಲ್ಲ... ಭಯಪಡಬೇಡ... ಬಾ... ಲಾಲಿ ಹಾಡಿ ಮಲಗಿಸುತ್ತೇನೆ...'

ನಸುನಗುತ್ತಾ ಅವನ ಕೈಹಿಡಿದು ರೂಮಿಗೆ ಕರೆದುಕೊಂಡು ಹೋದಳು. ಮೆಲ್ಲಗೆ ಅವನನ್ನು ಹಾಸಿಗೆಯ ಮೇಲೆ ಮಲಗಿಸಿದಳು. ನಂತರ ಮನು ಪಕ್ಕಕ್ಕೆ ಬಂದು ಮಲಗುವಷ್ಟರಲ್ಲಿ ಕಾಲಿಂಗ್ ಬೆಲ್ ಶಬ್ದ!

ಈ ಸಮಯದಲ್ಲಿ ಯಾರು ಬಂದಿರಬಹುದು? ಮನು ಎದ್ದ. ಅಷ್ಟರಲ್ಲಿ ಕಾಲಿಂಗ್ ಬೆಲ್ ಶಬ್ದ ನಿಂತಿತ್ತು.

'ನೋ... ಡಿಯರ್, ಯಾರಾದರಿರಲಿ... ಈ ಸಮಯದಲ್ಲಿ ಡಿಸ್ಟರ್ಬ್ ಮಾಡಬಾರದು. ನೀನು ನೆಮ್ಮದಿಯಿಂದ ಮಲಗು.'

ಕಮಲಾ ರೊಬೊ ಹೇಳಿತು.

ಮನು ಗೊಂದಲದಲ್ಲಿ ಬಿದ್ದ. ಮತ್ತೆ ಕಾಲಿಂಗ್ ಬೆಲ್! ಈ ಸಲ ಅದು ನಿಲ್ಲಲೇ ಇಲ್ಲ!! ಏನೋ ತುರ್ತು ಪರಿಸ್ಥಿತಿ ಇರುವಂತೆ ಮನುಗೆ ಭಾಸವಾಯಿತು.

ರೊಬೊ ಬೇಡ ಎಂದು ತಡೆಯುತ್ತಿದ್ದರೂ ಮನು ಧಾವಿಸಿ ಬಾಗಿಲು ತೆರೆದ.

'ಐ ಯಾಮ್ ಜಾಕೋಬ್... ರೊಬೊ ಡಿಸೈನರ್, ಬೇಗನೆ ರೊಬೊ ಎಮರ್ಜೆನ್ಸಿ ರಿಮೋಟ್ ಕೊಡಿ.'

ಆತ ಗಾಬರಿಯಲ್ಲಿದ್ದ. ಆತುರದಿಂದ ಮಾತಾಡುತ್ತಿದ್ದ.

'ಏಕೆ? ಏನಾಯಿತು?'

'ಪ್ರಶ್ನೆ ಆಮೇಲೆ, ಮೊದಲು ರಿಮೋಟ್ ಪ್ಲೀಸ್... ರಷ್... ನೋ ಟೈಮ್ ಫಾರ್